ಅಕ್ರಮ ಅಡುಗೆ ಅನಿಲ ಸಂಪರ್ಕಗಳನ್ನು ನಿಯಂತ್ರಿಸಲು ಸಾಧ್ಯವಾಗಿಲ್ಲ. ಹಂಚಿಕೆ ವ್ಯವಸ್ಥೆಯನ್ನು ಕಂಪ್ಯೂಟರೀಕರಣಗೊಳಿಸಿದೆ. ಬೇಡಿಕೆಯನ್ನು ನೊಂದಾಯಿಸಲು ದೂರವಾಣಿ ಸಂಪರ್ಕ ಕಡ್ಡಾಯವಾಗಿದೆ. ಅಲ್ಲಿಯೂ ತೊಡಕುಗಳು ಉಳಿದಿವೆ. ಸಿಲೆಂಡರ್ ವಿತರಣೆಯ ವಿಳಂಬದಿಂದ ಒಂದೇ ಸಿಲಿಂಡರ್ ಇದ್ದವರ ಬವಣೆ ಹೇಳುವಂತಿಲ್ಲ. ಪತಿ ಪತ್ನಿ ಉದ್ಯೋಗಸ್ಥರಾಗಿದ್ದ ನಗರ ಕುಟುಂಬಗಳಲ್ಲಿ ಅಡುಗೆ ಅನಿಲ ಪೂರೈಕೆಯಲ್ಲಿ ಆಗುವ ವ್ಯತ್ಯಯ ಕುಟುಂಬದ ವ್ಯವಸ್ಥೆಯನ್ನೇ ಏರುಪೇರು ಮಾಡುತ್ತದೆ.



# ಅಡುಗೆಯ ಕಷ್ಟ

ಅಡುಗೆ ಅನಿಲ ವಿತರಣೆಯ ಜಾಲ ರಾಜ್ಯದಾದ್ಯಂತ ವಿಸ್ತರಣೆ ಆಗಿರುವುದು ಉತ್ತಮ ಬೆಳವಣಿಗೆ. ಕೆಲವು ವರ್ಷಗಳ ಹಿಂದೆ ಕಾಡಂಚಿನ ಪ್ರದೇಶಗಳಲ್ಲಿ ಉರುವಲಿಗೆ ಕಟ್ಟಿಗೆಯನ್ನು ಬಳಸುವ ಮೂಲಕ ಕಾಡಿನ ನಾಶಕ್ಕೆ ನೆಪವಾಗುತ್ತದೆ ಎಂದು ಅರಣ್ಯ ಇಲಾಖೆಯೇ ಗ್ರಾಮೀಣ ಭಾಗದಲ್ಲಿ ಅಡುಗೆ ಅನಿಲ ಬಳಕೆಗೆ ಉತ್ತೇಜನ ನೀಡುವ ಕಾರ್ಯಕ್ರಮಗಳನ್ನು ಹಾಕಿಕೊಂಡಿತ್ತು. ಅದರ ಪರಿಣಾಮ ಗ್ರಾಮೀಣ ಪ್ರದೇಶಗಳಲ್ಲಿಯೂ ಅಡುಗೆ ಅನಿಲ ಬಳಕೆ ಆರಂಭವಾಗಿದೆ. ಬಳಕೆದಾರರ ಸಂಖ್ಯೆಯ ಹೆಚ್ಚಳಕ್ಕೆ ಅನುಗುಣವಾಗಿ ಬೇಡಿಕೆಯೂ ಹೆಚ್ಚಾಗುತ್ತಿದೆ. ಯಾವ ಸವಲತ್ತನ್ನು ಸರ್ಕಾರ ರಿಯಾಯಿತಿ ದರದಲ್ಲಿ ನೀಡಲು ಆರಂಭಿಸುತ್ತದೆಯೋ ಅದನ್ನು ದುರುಪಯೋಗಪಡಿಸಿಕೊಳ್ಳುವುದು ಸಮಾಜದ ಲಕ್ಷಣ. ಇದಕ್ಕೆ ತಡೆ ಹಾಕಬೇಕಾದವರೇ ದುರುಪಯೋಗದ ಫಲಾನುಭವಿಗಳೂ ಆಗಿರುವುದು ವ್ಯವಸ್ಥೆ ಹದಗೆಡುವುದಕ್ಕೆ ಕಾರಣ. ಸರ್ಕಾರದ ಸೌಲಭ್ಯ ಎಂದ ಮಾತ್ರಕ್ಕೆ ಅದನ್ನು ರಾಜಕೀಯ ಉದ್ದೇಶಕ್ಕೆ ಬಳಸಿಕೊಳ್ಳುವ ಪ್ರವೃತ್ತಿ ತತ್ವರಹಿತ ರಾಜಕೀಯ ವ್ಯವಸ್ಥೆಯಲ್ಲಿ ನೆಲೆಯೂರಿದೆ. ಇದರ ಪರಿಣಾಮ ಸೌಲಭ್ಯವನ್ನು ಪಡೆಯುವ ಫಲಾನುಭವಿಗಳ ಸಂಖ್ಯೆಯಲ್ಲಿ ಕೃತಕ ಹೆಚ್ಚಳ. ನಕಲಿಗಳ ಭರಾಟೆ.

ಕರ್ನಾಟಕದಲ್ಲಿಯೇ ಎಷ್ಟೋ ಲಕ್ಷ ಅಕ್ರಮ ಪಡಿತರ ಚೀಟಿಗಳಿವೆ ಎಂಬುದನ್ನು ಗುರುತಿಸಲಾಗಿತ್ತು. ಅಡುಗೆ ಅನಿಲ ಸಂಪರ್ಕಗಳ ಸಂಖ್ಯೆಗೂ ಒಟ್ಟು ಕುಟುಂಬಗಳ ಸಂಖ್ಯೆಗೂ ತಾಳೆ ಆಗದಿರುವಷ್ಟು ಹೆಚ್ಚುವರಿ ಸಂಪರ್ಕಗಳು ಚಲಾವಣೆಯಲ್ಲಿ ಇರುವ ಬಗ್ಗೆ ಸರ್ಕಾರವೇ ಒಪ್ಪಿಕೊಂಡಿದೆ. ನಕಲಿ ಪಡಿತರ ಚೀಟಿಗಳನ್ನು ರದ್ದು ಪಡಿಸುವುದು, ಅಕ್ರಮ ಅನಿಲ ಸಂಪರ್ಕಗಳನ್ನು ಪತ್ತೆ ಮಾಡಿ ರದ್ದುಪಡಿಸುವುದು ಸುಲಭದ ಕಾರ್ಯವಲ್ಲ. ಜನಪ್ರತಿನಿಧಿಗಳ ಕೈವಾಡದಿಂದಲೇ ಇಂಥ ಅಕ್ರಮಗಳು ನಡೆದಿರುತ್ತವೆ. ಬೇಲಿಯೇ ಎದ್ದು ಹೊಲ ಮೇಯುವಂಥ ಈ ವಿದ್ಯಮಾನ ಸ್ವಾತಂತ್ರ್ಯ ಗಳಿಸಿದ ದಿನದಿಂದಲೂ ನಡೆಯುತ್ತಲೇ ಬಂದಿದೆ. ರಾಜ್ಯದಲ್ಲಿ ಪ್ರಧಾನವಾಗಿ ಮೂರು ರಾಜಕೀಯ ಪಕ್ಷಗಳು ಅಧಿಕಾರ ನಡೆಸಿರುವುದರಿಂದ ಪ್ರತಿ ಪಕ್ಷದ ಆಡಳಿತ ಕಾಲದಲ್ಲಿಯೂ ಇಂಥ ವಿಪರೀತಗಳು ನಡೆದಿವೆ. ಹಿಂದಿನ ಸರ್ಕಾರಗಳು ಮಾಡಿದ ಅಕ್ರಮಗಳನ್ನು ತೊಡೆದು ಹಾಕುವುದರಲ್ಲಿ ಹೊಸಬಗೆಯ ಅಕ್ರಮಗಳು ತಲೆ ಎತ್ತುತ್ತವೆ. ಪಕ್ಷ ರಾಜಕೀಯವನ್ನು ಆಧರಿಸಿ ನಡೆಸುವ ಸುಧಾರಣೆ ಕ್ರಮಗಳಲ್ಲಿ ಕಷ್ಟ ಅನುಭವಿಸುವವರು ಮಾತ್ರ ಸಾಮಾನ್ಯ ಜನತೆ. ಅಡುಗೆ ಅನಿಲ ಸಂಪರ್ಕ– ಪೂರೈಕೆಗೆ ಸಂಬಂಧಿಸಿ ಸರ್ಕಾರದ ಕ್ರಮಗಳು ಜನರ ಬವಣೆಯನ್ನು ಮತ್ತಷ್ಟು ಹೆಚ್ಚಿಸಿವೆ.

ಈಚಿನ ಕೆಲವು ತಿಂಗಳಲ್ಲಿ ಅಡುಗೆ ಅನಿಲ ಪೂರೈಕೆಗೆ ಸಂಬಂಧಿಸಿ ಕೆಲವು ಸುಧಾರಣೆ ಕ್ರಮಗಳನ್ನು ಸರ್ಕಾರ ಆರಂಭಿಸಿದೆ. ಅಕ್ರಮ ಸಂಪರ್ಕಗಳನ್ನು ನಿವಾರಿಸುವುದಕ್ಕೆ ಸಾಧ್ಯವಾಗಲಿಲ್ಲವಾದರೂ ಹಂಚಿಕೆ ವ್ಯವಸ್ಥೆಯನ್ನು ಕಂಪ್ಯೂಟರೀಕರಣಗೊಳಿಸಿದೆ. ಬೇಡಿಕೆಯನ್ನು ನೊಂದಾಯಿಸಲು ದೂರವಾಣಿ ಸಂಪರ್ಕ ಕಡ್ಡಾಯವಾಗಿದೆ. ಎಲ್ಲ ಸುಧಾರಣಾ ಕ್ರಮಗಳಲ್ಲೂ ಆರಂಭದ ತೊಡಕುಗಳಿರುವಂತೆ ಈ ವ್ಯವಸ್ಥೆಯಲ್ಲಿಯೂ ಆಗಿದೆ. ರಾಜ್ಯದ ಜನತೆಯಲ್ಲಿ ಅಪಾರ ತಾಳ್ಮೆ ಇರುವುದರಿಂದ ಹೊಸ ಪರಿಸ್ಥಿತಿಗೆ ಹೊಂದಿಕೊಂಡಿದ್ದಾರೆ. ಮೊದಲೆಲ್ಲ ಬೇಡಿಕೆಯನ್ನು ನಿವೇದಿಸಿದ ಎಂಟು ಹತ್ತು ದಿನಗಳಲ್ಲಿ ಪೂರೈಕೆಯಾಗುತ್ತಿದ್ದ ಅಡುಗೆ ಅನಿಲದ ಸಿಲಿಂಡರ್ ಹೊಸ ವ್ಯವಸ್ಥೆಯಲ್ಲಿ ಅಷ್ಟು ದಿನಗಳಲ್ಲಿ ಸಿಗುತ್ತಿಲ್ಲ. ಇದು ವ್ಯವಸ್ಥೆಯಲ್ಲಿನ ದೋಷವೋ, ಪೂರೈಕೆಯಲ್ಲಿನ ಲೋಪವೋ ಈಚಿನ ದಿನಗಳಲ್ಲಿ ಇಪ್ಪತ್ತೈದು ದಿನಗಳಾದರೂ ಸಿಲಿಂಡರ್ ಪೂರೈಕೆ ಆಗುತ್ತಿಲ್ಲ. ನಗರ ಪ್ರದೇಶಗಳಲ್ಲಿ ಈ ಸ್ಥಿತಿ ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ತಿಂಗಳು ಮೀರಿದರೂ ಸಿಲಿಂಡರ್ ಸುಳಿವಿಲ್ಲ ಎಂಬ ಅನಿಶ್ಚಿತ ಸ್ಥಿತಿ. ಕುಟುಂಬಕ್ಕೆ ಒಂದೇ ಸಿಲಿಂಡರ್ ಇದ್ದವರ ಬವಣೆ ಹೇಳುವಂತಿಲ್ಲ. ಪತಿ ಪತ್ನಿ ಉದ್ಯೋಗಸ್ಥರಾಗಿದ್ದ ನಗರ ಕುಟುಂಬಗಳಲ್ಲಿ ಅಡುಗೆ ಅನಿಲ ಪೂರೈಕೆಯಲ್ಲಿ ಆಗುವ ವ್ಯತ್ಯಯ ಕುಟುಂಬದ ವ್ಯವಸ್ಥೆಯನ್ನೇ ಏರುಪೇರು ಮಾಡುತ್ತದೆ. ಗಾಯದ ಮೇಲೆ ಬರೆ ಎಳೆದಂತೆ ತೈಲ ಟ್ಯಾಂಕರ್‌ಗಳು ಆಗಾಗ ನಡೆಸುವ ಮುಷ್ಕರ ಅಡುಗೆ ಅನಿಲ ಪೂರೈಕೆ ವ್ಯವಸ್ಥೆಯನ್ನು ಇನ್ನಷ್ಟು ಹದಗೆಡಿಸುತ್ತಿದೆ.

ದೇಶ ಪೆಟ್ರೋಲಿಯಂ ಉತ್ಪನ್ನಗಳಿಗೆ ಹೊರದೇಶಗಳನ್ನು ಅವಲಂಬಿಸಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆ ಸ್ಥಿತಿ ಆಧರಿಸಿ ಇಲ್ಲಿಯೂ ಪೆಟ್ರೋಲಿಯಂ ಉತ್ಪನ್ನಗಳಿಗೆ ಬೆಲೆ ಆಗಾಗ ಏರುತ್ತಿರುತ್ತದೆ. ಅಷ್ಟು ಬೆಲೆಯನ್ನು ಬಳಕೆದಾರರು ತೆರಲೇಬೇಕು. ಆದರೆ, ದುಬಾರಿ ದರ ತೆತ್ತರೂ ಸಕಾಲದಲ್ಲಿ ಪೂರೈಕೆ ಆಗದಿದ್ದರೆ ಜನರು ಏನು ಮಾಡಬೇಕು? ಜನರನ್ನು ಅಸಹಾಯಕ ಸ್ಥಿತಿಯಲ್ಲಿ ಇರಿಸುವುದು ನಾಗರಿಕ ಸರ್ಕಾರಕ್ಕೆ ಶೋಭೆ ತರುವ ಸಂಗತಿಯಲ್ಲ.

■ **ಲಕ್ಷ್ಮಣ ಕೊಡಸೆ**